



> ಅನಿಯಂತ್ರಿತ ಮಧುಮೇಹ ಇರುವ ಕೊರೊನಾ ಗುಣಮುಖರಾದವರು ಆಗಾಗ ರಕ್ತದಲ್ಲಿರುವ ಸಕ್ಕರೆ ಪ್ರಮಾಣ ಪರಿಶೀಲನೆ ಮಾಡಿಕೊಳ್ಳಬೇಕು. ಕಪ್ಪು ಶಿಲೀಂದ್ರದ ಯಾವುದೇ ಲಕ್ಷಣ ಕಂಡುಬಂದರೂ ತಡಮಾಡದೆ ತಜ್ಞರನ್ನು ಸಂಪರ್ಕಿಸಬೇಕು.
>
> **–ಡಾ. ಅತಿರಾ,** ತಲೆ ಮತ್ತು ಕತ್ತು ಸರ್ಜನ್, ಫೋರ್ಟಿಸ್ ಆಸ್ಪತ್ರೆ, ಬೆಂಗಳೂರು

## ಲಕ್ಷಣಗಳೇನು?

ಕಪ್ಪು ಶಿಲೀಂದ್ರ ಸೋಂಕು ಸಾಮಾನ್ಯವಾಗಿ ಮೂಗಿನ ಮೂಲಕವೇ ಪ್ರವೇಶವಾಗುವುದು. ಸೈನಸ್ ಭಾಗಕ್ಕೆ ಅಂಟಿಕೊಂಡು ಕಾಡಲಾರಂಭಿಸುತ್ತದೆ. ಸೈನಸ್ ಮೂಲಕ ಕಣ್ಣುಗಳ ಕಡೆಗೆ ಸೋಂಕು ಚಲಿಸಿದರೆ ದೃಷ್ಟಿ ಕಳೆದುಕೊಳ್ಳಬೇಕಾಗುತ್ತದೆ. ಮೆದುಳಿನ ಕಡೆಗೆ ಹೋದರೆ ಇದು ಮಾರಣಾಂತಿಕ. ಸೋಂಕು ತಗುಲಿದ ಬಳಿಕ ಕಂಡುಬರುವ ಲಕ್ಷಣಗಳೆಂದರೆ...

- ಅತಿಯಾದ ತಲೆನೋವು
- ಕಣ್ಣುನೋವು
- ಕಣ್ಣು ಕೆಂಪಾಗುವುದು
- ಕಿವಿಯ ಹಿಂದೆ ಊತ
- ಕಣ್ಣುಗುಡ್ಡೆ ಮುಂದೆ ಬರುವುದು
- ಕಣ್ಣಿನ ಸುತ್ತಲಿನ ಭಾಗದಲ್ಲಿ ನೋವು
- ಚರ್ಮ ಕಪ್ಪಾಗುವುದು
- ದವಡೆ ಭಾಗದಲ್ಲಿ ನೋವು
- ಮೂಗು ಕಟ್ಟುವುದು
- ಮೂಗಿನಲ್ಲಿ ರಕ್ತ ಸೋರುವುದು
- ಹಲ್ಲುಗಳು ಸಡಿಲಗೊಳ್ಳುವುದು

ಫಂಗಸ್ ಬೇಗನೆ ಕಾಣಿಸಿಕೊಳ್ಳುತ್ತದೆ. ಈಗ ಕೋವಿಡ್ ಚಿಕಿತ್ಸೆ ಪಡೆದು ಮನೆಗೆ ತೆರಳಿದವರಲ್ಲಿ ಕಾಣಿಸಿಕೊಳ್ಳಲಾರಂಭಿಸಿದೆ. ಇದಕ್ಕೆ ಪ್ರಮುಖ ಕಾರಣ ಕೊರೊನಾ ಉಪಚರಿಸುವಾಗ ನೀಡುವ ಸ್ಟೀರಾಯ್ಡ್‌ಗಳು. ಜೊತೆಗೆ ಕುಂದಿರುವ ರೋಗನಿರೋಧಕ ಶಕ್ತಿ ಎಂದು ಹೇಳುತ್ತಾರೆ ಡಾ. ಅತಿರಾ.

'ಹಾಗೆಂದು ಕಪ್ಪು ಶಿಲೀಂದ್ರ ಕೊರೊನಾ ಮೊದಲನೆ ಅಲೆ ಸಮಯದಲ್ಲಿ ಇರಲಿಲ್ಲವೆಂದಲ್ಲ. ಜೊತೆಗೆ ಕೊರೊನಾಕ್ಕಿಂತ ಮೊದಲು ಕೂಡ 10 ಲಕ್ಷ ಜನರಲ್ಲಿ 100 ಜನರಿಗೆ ಬ್ಲ್ಯಾಕ್ ಫಂಗಸ್ ಕಾಯಿಲೆ ಬರುತ್ತಿತ್ತು ಆದರೆ ಇದರ ಬಗ್ಗೆ ಯಾರಿಗೂ ಅರಿವು ಇರಲಿಲ್ಲ. ಸರ್ಜನ್ ಆದ ನಾವೆಲ್ಲರೂ ವರ್ಷಕ್ಕೆ 10ರಿಂದ 12 ಪ್ರಕರಣಗಳಿಗೆ ಚಿಕಿತ್ಸೆಯನ್ನೂ ನೀಡುತ್ತಿದ್ದೆವು. ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಮಾತ್ರ ಸರ್ಜರಿ, ಚಿಕಿತ್ಸೆ ನೀಡುತ್ತಿದ್ದೆವು. ಈಗ ಕೊರೊನಾ ಬಂದ ಮೇಲೆ ಈ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ' ಎಂದು ವಿವರ ನೀಡುತ್ತಾರೆ ಅವರು.

### ದೃಷ್ಟಿ ಸಮಸ್ಯೆ ಅಪಾಯಕಾರಿ

'ಕೊರೊನಾ ಬರುವುದಕ್ಕೆ ಮೊದಲೂ ಕಪ್ಪು ಶಿಲೀಂದ್ರ ಸೋಂಕು ಪ್ರಕರಣಗಳು ವರ್ಷಕ್ಕೆ ಒಂದೆರಡು ಕಂಡುಬರುತ್ತಿದ್ದವು. ಕೊರೊನಾ ಸೋಂಕಿನಿಂದ ತೀವ್ರ ತೊಂದರೆ ಅನುಭವಿಸಿದ ರೋಗಿಗಳಲ್ಲಿ ಕಪ್ಪು ಫಂಗಸ್ ಬಂದರೆ ಮೊದಲ ಹಂತದಲ್ಲಿ ದೃಷ್ಟಿ ಮಂಜಾಗುತ್ತದೆ. ಸೋಂಕು ವ್ಯಾಪಿಸುತ್ತಾ ಹೋದಂತೆ ದೃಷ್ಟಿಯನ್ನೇ ಕಳೆದುಕೊಳ್ಳುವ ಪ್ರಮೇಯವೂ ಬರಬಹುದು' ಎಂದು ಹೇಳುತ್ತಾರೆ ಬೆಂಗಳೂರಿನ ನೇತ್ರತಜ್ಞೆ ಡಾ. ಸಂಧ್ಯಾರಾಣಿ.

'ಮೊದಲು ಕಣ್ಣುಗಳ ಊತ, ನೋವು, ಕೆಂಪಾಗುವಿಕೆ, ಕಣ್ಣುಗುಡ್ಡೆ ಮುಂದೆ ಬರುವುದು, ಮೂಗು ಕಟ್ಟುವುದರಿಂದ ಕಣ್ಣು ದೃಷ್ಟಿಯಲ್ಲಿ ವಸ್ತು ಅಥವಾ ಎದುರಿನ ವ್ಯಕ್ತಿ ಎರಡೆರಡಾಗಿ ಕಾಣಿಸುವುದು ಮುಂತಾದ ಸಮಸ್ಯೆಗಳು ಎದುರಾಗುತ್ತವೆ. ಇದನ್ನು ಕಡೆಗಣಿಸಿದರೆ ಅಪಾಯ ತಪ್ಪಿದ್ದಲ್ಲ' ಎನ್ನುತ್ತಾರೆ ಈ ನೇತ್ರತಜ್ಞೆ.

### ಬ್ಲ್ಯಾಕ್ ಫಂಗಸ್ ಪತ್ತೆ ಹೇಗೆ?

'ಸಾಮಾನ್ಯವಾಗಿ ಕೊರೊನಾ ಸೋಂಕಿತರಲ್ಲಿಯೇ ಇದು ಕಂಡುಬರುವ ಸಮಸ್ಯೆ. ಮೂಗಿನಲ್ಲಿ ಇರುವ ಚರ್ಮಕ್ಕೆ ಚೈತನ್ಯ ಇಲ್ಲದೇ ಹೋದಾಗ ಚರ್ಮ ಕಪ್ಪುಬಣ್ಣಕ್ಕೆ ತಿರುಗುತ್ತದೆ. ಇದನ್ನು ಮೈಕ್ರೊಸ್ಕೋಪ್‌ನಲ್ಲಿ ನೋಡಿದಾಗ ಫಂಗಸ್ ಅಂಟಿಕೊಂಡಿರುವುದು ಪತ್ತೆಯಾಗುತ್ತದೆ. ಸಿಟಿ ಸ್ಕ್ಯಾನ್ ಮೂಲಕವೂ ಇದನ್ನು ಸುಲಭವಾಗಿ ಪತ್ತೆಹಚ್ಚಬಹುದು. ಈ ಫಂಗಸ್ ಒಬ್ಬರಿಂದ ಇನ್ನೊಬ್ಬರಿಗೆ ಸುಲಭವಾಗಿ ಹರಡುವುದಿಲ್ಲ. ಆದರೆ ಈ ರೋಗ ಯಾವ ವಯಸ್ಸಿನಲ್ಲಾದರೂ ಬರಬಹುದು. ನಾವೇ 23 ವರ್ಷದ ಯುವಕನಿಂದ ಹಿಡಿದು 73 ವರ್ಷದ ವಯೋವೃದ್ಧನವರೆಗೆ ಕಪ್ಪು ಶಿಲೀಂದ್ರಕ್ಕೆ ಚಿಕಿತ್ಸೆ ನೀಡಿದ್ದೇವೆ. ಆದರೆ ಯಾವುದೇ ಕಾರಣಕ್ಕೂ ಈ ಫಂಗಸ್‌ಗೆ ಮನೆಮದ್ದು ಮಾಡಿಕೊಂಡು ಕುಳಿತುಕೊಳ್ಳಬೇಡಿ' ಎಂದು ಹೇಳುತ್ತಾರೆ ಡಾ. ಅತಿರಾ.